

## 500 ವರ್ಷ ಐತಿಹ್ಯದ ಅರಮನೆ ಗೌರಿ!

ಪ್ರತಿವರ್ಷ ಸಾಗರದ ಶ್ಯಾಮ ಪ್ರಸಾದ್ ಮುಖರ್ಜಿ ರಸ್ತೆಯಲ್ಲಿರುವ ಜೋಯ್ಸ್ ಮನೆತನದವರು ಗೌರಿಹಬ್ಬದ ದಿನ ವರದಾ ನದಿಯಿಂದ ನೀರು ತಂದು ಮನೆಯಲ್ಲೇ ಕಡಲೆ ಹಿಟ್ಟಿನಿಂದ ಮಾಡಿದ ಗೌರಿಯನ್ನು ಸ್ಥಾಪಿಸಿ ಪೂಜಿಸಿ, ಗಣೇಶ ಚತುರ್ಥಿಯ ದಿನ ಗಣೇಶನನ್ನು ತಂದು ಗೌರಿ ಮತ್ತು ಗಣೇಶನನ್ನು ಜೊತೆಯಾಗಿಯೇ ವಿಸರ್ಜಿಸುತ್ತಾರೆ.

ಈ ಸ್ವರ್ಣಗೌರಿಯು ಕೆಳದಿ/ಇಕ್ಕೇರಿ ಅರಸರ ಕಾಲದಲ್ಲಿ ಅರಮನೆಯಲ್ಲಿ ಪೂಜಿಸಲ್ಪಡುತ್ತಿದ್ದ ಗೌರಿ. ಕಾಲ ಕ್ರಮೇಣ ಕೆಳದಿಯ ನಾಯಕರ ನಂತರ ಅಲ್ಲಿದ್ದ ಕೆಲ ಪುರೋಹಿತ ಮನೆತನಗಳಲ್ಲಿ ಒಂದಾಗಿದ್ದ ಜೋಯ್ಸ್ ಕುಟುಂಬವು ಸ್ವರ್ಣ ಗೌರಿ ವ್ರತವನ್ನು ಇಂದಿಗೂ ಆಚರಿಸಿಕೊಂಡು ಬರುತ್ತಿದ್ದಾರೆ. ಅನಂತ ಜೋಯ್ಸ್‌ರವರು ಈ ಪದ್ಧತಿಯನ್ನು ಸಾಗರದಲ್ಲಿ ಆರಂಭಿಸಿದರು. ನಂತರ ಅವರ ಮಕ್ಕಳಾದ ಕಳಿಂಗ ಜೋಯ್ಸ್ ಮತ್ತು ಸುಬ್ಬಾ ಜೋಯ್ಸ್‌ರವರ ಪೀಳಿಗೆಯವರು ಪ್ರಸ್ತುತ ಈ ವ್ರತವನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಕೆಳದಿಯ ಅರಸರು 11 ವರಹಗಳನ್ನು ಮತ್ತು ಬ್ರಿಟಿಷ್ ಸರ್ಕಾರ 11 ರೂಪಾಯಿಗಳನ್ನು ಅರಮನೆ ಗೌರಿ ವ್ರತಕ್ಕೆ ನೀಡುತ್ತಿದ್ದರಂತೆ. ಭಕ್ತರು ಇಲ್ಲಿಗೆ ಬಂದು ದೇವಿಯ ದರ್ಶನ ಪಡೆದು ಉಡಿ ತುಂಬಿ ದೇವಿಯನ್ನು ಮುಟ್ಟಿ ಅರಿಶಿನ ಕುಂಕುಮವನ್ನು ಹಚ್ಚಿ ನಮಸ್ಕರಿಸಬಹುದು.

—ಅಂಜನ್ ಕಾಯ್ಕಿಣಿ, ಸಾಗರ





## ಎಣಿವಕ್ಕಿಯ ಗೂಡು

ಕಪ್ಪುವರ್ಣದ ಎಣೆವಕ್ಕಿ ಮನುಷ್ಯನ ಮೇಲೆ ಹೆಚ್ಚು ವಿಶ್ವಾಸವಿಡುವ ಪಕ್ಷಿ. ಮೊಟ್ಟೆಯಿಡುವ ಸಮಯದಲ್ಲಿ ಮನೆ ಕಿಟಕಿಯ ಬಳಿ ಏನಾದರೂ ಆಧಾರ ಸಿಕ್ಕಿದರೆ ಒಣ ತರಗೆಲೆ, ಜೇಡನ ಬಲೆಗಳನ್ನು ತಂದು ಸೊಗಸಾದ ಗೂಡುದೀಪದಂತಹ ಮನೆ ಕಟ್ಟುತ್ತದೆ. ಗಂಡು ಹೆಣ್ಣು ಹಕ್ಕಿಗಳು ಒಂದೇ ಗೂಡಿನಲ್ಲಿರುತ್ತವೆ. ಹೂಗಳ ಮಕರಂದವೇ ಅದರ ಆಹಾರ. ಮೊಟ್ಟೆ ಮರಿಯಾದ ಬಳಿಕ ಗೂಡು ತೊರೆಯುತ್ತದೆ. ಅಳದಂಗಡಿಯ ಶಿಕ್ಷಕರೊಬ್ಬರ ಮನೆಯ ಕಿಟಕಿಯ ಬಳಿ ಕಂಡುಬಂದ ಎಣೆವಕ್ಕಿ ಗೂಡು ಇದು.

—ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ



## ಅತಿ ವಿರಳ ಸೂರ್ಯನಾರಾಯಣ

ವಿಜಯನಗರ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿರುವ ಹೂವಿನ ಹಡಗಲಿಯಲ್ಲಿ ಕ್ರಿ.ಶ.1090ರಲ್ಲಿ ಚಾಲುಕ್ಯರ ಅರಸ ವಿಕ್ರಮಾದಿತ್ಯನ ಕಾಲದಲ್ಲಿ ಸೇನಾಪತಿಯ ಮಡದಿಯಾದ ರಬ್ಬಲದೇವಿಯ ತವರು ಊರು 'ಪೂವಿನಪೊಸವಾಡಂಗಿಲೆ' ಎಂದು ಕರೆಯುತ್ತಿದ್ದರು. ಕಾಲಕ್ರಮೇಣ ಹೂವಿನ ಹಡಗಲಿ ಆಯಿತು. ಶಶಿಧರ ದೇವಾಲಯದಲ್ಲಿ (ಮೂರುದೇವರ ಗುಡಿ) ಸೂರ್ಯನಾರಾಯಣ, ಈಶ್ವರ, ಬೆಣ್ಣೆ ಕೃಷ್ಣ ದೇವಾಲಯ ಇರುವುದರಿಂದ ಇದನ್ನು ಮೂರುದೇವರ ಗುಡಿ ಎಂದು ಕರೆಯಲಾಗುತ್ತದೆ. ಈ ದೇವಾಲಯವು ಜಕಣಾಚಾರಿ ಕೆತ್ತನೆಯಲ್ಲಿ ರೂಪುಗೊಂಡದ್ದು. ಇಲ್ಲಿನ ಸೂರ್ಯನಾರಾಯಣ ವಿಗ್ರಹದ ಸುತ್ತಲೂ ದಶಾವತಾರ ಮಾದರಿಯ ಸುಂದರ ಕೆತ್ತನೆಯನ್ನು ಕಾಣಬಹುದು. ಸೂರ್ಯನಾರಾಯಣ ಮೂರ್ತಿ ದೇವಾಲಯ ಇರುವುದು ಅತಿ ವಿರಳ.

—ಮೇಘನಾ ರಘುನಂದನ್, ಹೂವಿನ ಹಡಗಲಿ

